‘ನಾನು ನಿಮ್ಮನ್ನು ತುಂಬಾ ಉನ್ನತ ಮಟ್ಟದಲ್ಲಿ ಕಂಡಿದ್ದೆ. ನಿಮ್ಮ ಸರಳತೆ, ನಿಮ್ಮ ಬೌದ್ಧಿಕ ಎತ್ತರ, ಸಹೃದಯ ಗುಣಗಳಿಂದ ನಾನು ಪ್ರಭಾವಿತನಾಗಿ ಬದುಕಿನ ದಾರಿಯಲ್ಲಿ ಹೊಸ ತಿರುವುಗಳನ್ನು ಕಂಡಿದ್ದೆ. ಆ ತಿರುವುಗಳು ದರ್ಶಿಸಿದ ಅನುಭಗಳಿಂದ ಬೆರಗುಗೊಂಡಿದ್ದೆ. ಹೀಗೆ ನನ್ನ ಬದುಕಿಗೆ ಹೊಸ ಹೊಳಹುಗಳನ್ನು ಕೊಟ್ಟ ನೀವೀಗ ಇದ್ದಕ್ಕಿದ್ದಂತೆ ನನ್ನ ಸ್ನೇಹವನ್ನು ನಿರಾಕರಿಸುತ್ತಿದ್ದೀರೇನೊ ಎಂಬ ಭಾವ ಕಾಡುತ್ತಿದೆ. ನಾನು ನಿಮ್ಮ ಮಟ್ಟದ ವ್ಯಕ್ತಿಯಲ್ಲ ಎಂಬ ಭಾವ ನಿಮ್ಮಲ್ಲಿ ಮೂಡಿರಬಹದು. ಅಥವಾ ನಾನು ಬೇರೇನೊ ಉದ್ದೇಶ ಹೊಂದಿದ್ದೇನೆ ಎಂಬ ವಿಚಾರವೂ ನಿಮ್ಮಲ್ಲಿ ಬಂದಿರಬಹುದು. ಆದ್ದರಿಂದ ಇತ್ತೀಚಿನ ದಿನಗಳಲ್ಲಿ ನೀವು ನನಗೆ ಸ್ಪಂದಿಸುತ್ತಿಲ್ಲ. ನನ್ನ ಮಾತುಗಳಿಗೆ ಪ್ರತಿಕ್ರಿಯೆ ನೀಡುತ್ತಿಲ್ಲ, ಅಲ್ಲವೇ? ನಿಮ್ಮೊಂದಿಗೆ ನಾನೇನಾದರೂ ಆ ರೀತಿ ವರ್ತಿಸಿದ್ದರೆ ಕ್ಷಮೆ ಇರಲಿ. ಈ ನಿಮ್ಮ ಮೌನ ಮಾತ್ರ ಅಸಹನೀಯವೆನಿಸುತ್ತಿದೆ. ಮನಸ್ಸಿಗೆ ಹಿತವಿಲ್ಲದಾಗಿದೆ. ನಾನು ಬೆಂಗಳೂರಿಗೆ ಬಂದಾಗ ಮತ್ತೆ ಮುಖಾಮುಖಿಯಾಗೋಣ. ನಿಮ್ಮನ್ನು ಮತ್ತೆ ನೋಡಬೇಕೆಂಬ ಹಂಬಲವಿದೆ. ನಿಮ್ಮೊಂದಿಗೆ ಮಾತನಾಡುವ ವಿಚಾರಗಳೂ ಬಹಳ ಇವೆ.’

ಬೆಳಗಿನ ಹೊತ್ತು ಮನೆಯ ಏಕಾಂತದಲ್ಲಿದ್ದ ಮೋಹನ ವಾಟ್ಸ್‌ಆ್ಯಪ್‌ನಲ್ಲಿ ಹೀಗೆ ಬರೆದು ಮೇದಿನಿಗೆ ಕಳುಹಿಸಿದ. ಆರು ತಿಂಗಳುಗಳ ಹಿಂದಷ್ಟೇ ಫೇಸ್‌ಬುಕ್‌ನಲ್ಲಿ ಅನಿರೀಕ್ಷಿತವಾಗಿ ಪರಿಚಿತಳಾಗಿ, ಪರಿಚಯ ಭೇಟಿಗೆ ತಿರುಗಿ, ಬೆಂಗಳೂರಿನಲ್ಲಿ ಪರಸ್ಪರ ಮುಖಾಮುಖಿಯಾದಾಗ ಇಬ್ಬರ ಅಂತರಂಗ ಅನಾವರಣಗೊಂಡು ಆತ್ಮೀಯತೆ ಬೆಳೆದಿತ್ತು. ಅಂದು ಮೋಹನ ಅವಳಿಗೆ ಮೆಟ್ರೊ ನಿಲ್ದಾಣದಲ್ಲಿ ವಿದಾಯ ಹೇಳಿ ಬಂದ ಬಳಿಕ, ಕೆಲವು ದಿನಗಳಲ್ಲಿ ಇದ್ದಕ್ಕಿಂತೆ ಅವಳ ವರ್ತನೆ ಬದಲಾಗಿತ್ತು. ಆ ವರೆಗೆ ಇವನ ಪ್ರತಿಯೊಂದು ವಾಟ್ಸ್‌ಆ್ಯಪ್ ಸಂದೇಶಗಳಿಗೂ ತಕ್ಷಣ ಪ್ರತಿಕ್ರಿಯಿಸುತ್ತಿದ್ದ ಮೇದಿನಿ ಸ್ತಬ್ಧವಾಗಿದ್ದಳು. ಕಾರಣ ತಿಳಿಯದೇ ಮೋಹನ ಆಗಾಗ ತನಗನಿಸಿದ್ದನ್ನೆಲ್ಲಾ ವಾಟ್ಸ್‌ಆ್ಯಪ್‌ನಲ್ಲಿ ಬರೆದು ಸಂದೇಶಗಳನ್ನು ಕಳುಹಿಸುತ್ತಲೇ ಇದ್ದ. ಅವಳಿಂದ ಮಾತ್ರ ಉತ್ತರವೇ ಬರುತ್ತಿರಲಿಲ್ಲ. ಅಂದು ಮಾತ್ರ ಹೀಗೆ ಬರೆದು ಹಾಕಿದ ಸ್ವಲ್ಪ ಹೊತ್ತಿನಲ್ಲೇ ಮೇದಿನಿ ಅನಿರೀಕ್ಷಿತವಾಗಿ ಪ್ರತಿಕ್ರಿಯಿಸಿ ಉತ್ತರಿಸಿದಳು!

‘ಕ್ಷಮಿಸಿ, ನಾನು ನಿಮ್ಮನ್ನು ಮತ್ತೆ ಭೇಟಿ ಮಾಡುವುದು ಕಷ್ಟವಾಗಬಹುದು. ನಾನು ನಿಮ್ಮನ್ನು ಸ್ನೇಹಿತನಂತೆ ನೋಡಿದೆ. ಆದರೆ, ಈ ವರೆಗೆ ನೀವು ನನಗೆ ಕಳುಹಿಸಿದ ಸಂದೇಶಗಳನ್ನು ಗಮನಿಸಿದರೆ